1	2	3	4	5
31	Commandant 1st Btn Bangalore	565		
32	Commandant 2nd Btn Belagaum			576
33	Commandant 3rd Btn Bangalore	554		
34	Commandant 4th Btn Bangalore	497		
35	Commandant 5th Btn Mysore		539	
36	Commandant 6th Btn Gulbarga			386
37	Commandant 7th Btn Mangalore			437
38	Commandant 8th Btn Shimoga			364
39	Commandant 9th Btn Bangalore	399		
40	Commandant 10th Btn Shiggaon			465
	Total	**9,134**	**9,800**	**10,249**

5396(6206) ಶ್ರೀ ಮಾಮನಿ ವಿಶ್ವನಾಥ್ ಕರಬಸಪ್ಪ (ಪರಸಗಡ) : ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಮಲಪ್ರಭಾ ಯೋಜನೆ ಅಚ್ಚುಕಟ್ಟು ಪ್ರದೇಶದಲ್ಲಿರುವ ಏತ ನೀರಾವರಿ ಯೋಜನೆಗಳೆಷ್ಟು?

ಆ) ಏತ ನೀರಾವರಿ ಯೋಜನೆಯ ಮುಖ್ಯ ಕಾಲುವೆಗಳು ಯಾವ ಸಾಲಿನಲ್ಲಿ ನಿರ್ಮಾಣವಾಗಿವೆ?

ಇ) ಈ ಯೋಜನೆಯ ಮುಖ್ಯ ಕಾಲುವೆಗಳ ಪುನರ್ಚೇತನ ಕಾರ್ಯ ಎಷ್ಟು ಕಿಮೀ. ಆಗಿವೆ ಮತ್ತು ಬಾಕಿ ಕಾಮಗಾರಿಯ ವಿವರ ನೀಡುವದು.

ಈ) ಈ ಯೋಜನೆಯ ನೀರಿನ ಸದ್ಭಳಕೆಯಾಗಲು ಮತ್ತು ಕಾಲುವೆಗಳ ಸೋರುವಿಕೆಯನ್ನು ತಡೆಯಲು ಸರಕಾರ ಕೈಕೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಮಲಪ್ರಭಾ ಯೋಜನೆಯ ಅಚ್ಚುಕಟ್ಟು ಪ್ರದೇಶದ ಜಲಾಶಯದ ಯೋಜನೆಯ ಅಚ್ಚುಕಟ್ಟು ಪ್ರದೇಶದ ಜಲಾಶಯದ ಹಿನ್ನೀರಿಗೆ ನಿರ್ಮಿಸಲಪಟ್ಟ 10 ಏತ ನೀರಾವರಿ ಯೋಜನೆಗಳಲ್ಲಿ 6 ಮತ್ತು ಮಲಪ್ರಭಾ ಎಡದಂಡೆ ಕಾಲುವೆ ಕಿಮೀ. 8+870 ರಲ್ಲಿ ನಿರ್ಮಿಸಿರುವ ಯರಗಟ್ಟಿ ಏತ ನೀರಾವರಿ ಯೋಜನೆ ಸೇರಿ ಒಟ್ಟು 7 ಏತ ನೀರಾವರಿ ಯೋಜನೆಗಳು ಸವದತ್ತಿ ತಾಲ್ಲೂಕಿನಲ್ಲಿ ಇರುತ್ತವೆ.

ಆ) ಸವದತ್ತಿ ತಾಲ್ಲೂಕಿನ ರೇಣುಕಾ, ಸಿಂಗಾರಕೊಪ್ಪ ಏಣಗಿ–ಹಿಟ್ಟಣಗಿ, ಮಲ್ಲೂರ–ಮಾಟೋಳ್ಳಿ ಮತ್ತು ಹೊಸೂರು–ವಕ್ಕುಂದ ಏತ ನೀರಾವರಿ ಯೋಜನೆಗಳ ಮುಖ್ಯ ಕಾಲುವೆಗಳು 1978, ರಲ್ಲಿ ಬಡ್ಲಿ–ಕಾತ್ರಾಳ ಏತ ನೀರಾವರಿ ಯೋಜನೆಯ ಮುಖ್ಯ ಕಾಲುವೆಯು 1992ರಲ್ಲಿ ಹಾಗೂ ಯರಗಟ್ಟಿ ಏತ ನೀರಾವರಿ ಯೋಜನೆಯ ಮುಖ್ಯ ಕಾಲುವೆಯು 1982 ರಲ್ಲಿ ನಿರ್ಮಿಸಲ್ಪಟ್ಟಿವೆ.

ಇ) ಯರಗಟ್ಟಿ ಏತ ನೀರಾವರಿ ಯೋಜನೆಯ ಮೇಲ್ಮಟ್ಟ ಕಾಲುವೆ 26.00 ಕಿಮೀ. ಇದ್ದು ಅದರಲ್ಲಿ 7 ಕಿ.ಮೀ.ನ ಆಯ್ದ ಭಾಗಗಳಲ್ಲಿ ಹಾಗೂ ಕೆಳಮಟ್ಟ ಕಾಲುವೆಯು 23.00 ಕಿ. ಮೀ. ಉದ್ದವಿದ್ದು ಅದರಲ್ಲಿ 1 ಕಿ.ಮೀ.ನ ಆಯ್ದಭಾಗಗಳಲ್ಲಿ ಸೋರುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಪುನರ್ಚೇತನ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಈ) ಯರಗಟ್ಟಿ ಏತ ನೀರಾವರಿ ಯೋಜನೆಯ ಮುಖ್ಯ ಕಾಲುವೆಗಳು ಗುಡ್ಡದ ತಿರುವಿನಲ್ಲಿ ಹಾಯುತ್ತಿದ್ದು ಇತ್ತೀಚಿನ ವರ್ಷಗಳಲ್ಲಿ ಸೋರುವಿಕೆ ಕಂಡು ಬಂದಿರುವುದರಿಂದ ಸೋರುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಹಂತ ಹಂತವಾಗಿ ಪುನರ್ಚೇತನ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಇನ್ನುಳಿದ 6 ಏತ ನೀರಾವರಿ ಯೋಜನೆಗಳ ಕಾಲುವೆಗಳಲ್ಲಿ ತುಂಬಿರುವ ಹೂಳು ಮತ್ತು ಬೆಳೆದಿರುವ ಕಂಟಿಗಳನ್ನು ತೆಗೆಸುವುದು ಹಾಗೂ ಅಲ್ಲಲ್ಲಿ ಶಿಥಿಲಗೊಂಡಿರುವ ಲೈನಿಂಗ್‌ಗಳನ್ನು ದುರಸ್ತಿ ಪಡಿಸುವ ನಿಟ್ಟಿನಲ್ಲಿ ಲಭ್ಯವಾಗುವ ಯೋಜನೇತರ ಲೆಕ್ಕಶೀರ್ಷಿಕೆ ಅನುದಾನದಲ್ಲಿ ಹಂತ ಹಂತವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

5397(6207) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸವದತ್ತಿ ತಾಲ್ಲೂಕಿನ ಶ್ರೀ ರೇಣುಕಾ ಯಲ್ಲಮ್ಮನ ದೇವಸ್ಥಾನ ಯಲ್ಲಮ್ಮ ಗುಡ್ಡ ಜಾತ್ರೆ ಸಮಯದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯ ರಸ್ತೆ, ಸಾರಿಗೆ ಬಸ್ಸುಗಳು ಅಲ್ಲದೆ ಖಾಸಗಿ ವಾಹನಗಳು ಬಹಳಷ್ಟು ಪ್ರಮಾಣದಲ್ಲಿ ಬರುವುದರಿಂದ ಜೋಗುಳ ಭಾಂವಿಯ ಹತ್ತಿರ ವಾಹನ ಸಂಚಾರ 4-5 ಗಂಟೆಗಳು ಸ್ಥಗಿತಗೊಂಡು ಪ್ರಯಾಣಿಕರಿಗೆ ಅನಾನೂಕೂಲವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಜೋಗುಳ ಭಾಂವಿ ಹತ್ತಿರ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳಿಗೆ ಮತ್ತು ಖಾಸಗಿ ವಾಹನಗಳಿಗೆ ವ್ಯವಸ್ಥಿತವಾದ ನಿಲುಗಡೆ ವ್ಯವಸ್ಥೆ ಮಾಡಿ ಸಾರ್ವಜನಿಕರು ಮತ್ತು ಪ್ರಯಾಣಿಕರಿಗೆ ಅನುಕೂಲ ಮಾಡಿ ಕೊಡಲು ಸರಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಬಂದಿದೆ.

ಆ) ಜೋಗುಳ ಭಾಂವಿಯ ಹತ್ತಿರ ರಸ್ತೆಯ ಎಡಗಡೆಗೆ ವಾಹನ ನಿಲುಗಡೆ ವ್ಯವಸ್ಥೆ ಮಾಡಲಾಗಿದೆ. ಭಕ್ತಾಧಿಗಳು ಹೆಚ್ಚಾಗುತ್ತಿರುವುದರಿಂದ ರಸ್ತೆಯ ಎರಡು ಬದಿಗಳಲ್ಲಿ ವಾಹನಗಳನ್ನು ನಿಲ್ಲಿಸಲು ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ಪೊಲೀಸ್ ಇಲಾಖೆಯ ತಾತ್ಕಾಲಿಕ ಶೆಡ್ ಪಕ್ಕದಲ್ಲಿಯೂ ಸಹ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಿ, ಸಾರ್ವಜನಿಕರು ಮತ್ತು ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಲಾಗಿದೆ.

5398(6208) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸವದತ್ತಿ ತಾಲ್ಲೂಕಿನ ಕೊರಕೊಪ್ಪ ಗ್ರಾಮದ ಹತ್ತಿರ ಕೆರೆಯ ನಿರ್ಮಾಣ ಕಾಮಗಾರಿಗೆ ಯಾವಾಗ ಮಂಜೂರಾತಿ ನೀಡಲಾಯಿತು;

ಆ) ಈ ಕಾಮಗಾರಿಯ ಅಂದಾಜು ಮೊತ್ತವೆಷ್ಟು;

ಇ) ಕಾಮಗಾರಿ ಕೆಲಸ ಪ್ರಾರಂಭ ಗೊಂಡು ಈಗ ಸ್ಥಗಿತಗೊಂಡಿದ್ದಕ್ಕೆ ಕಾರಣಗಳೇನು;